## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಒದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.



ಬೇಲೂರು ಚನ್ನಕೇಶವ ದೇಗುಲ



ಸಂದೇ ಆಗೋವರಗೆ ಎಲ್ಲೀಮಟ ನಡೆಯಕ್ಕಾಗುತ್ತೋ ಅಲ್ಲೀವರ್ಗೂ ನಡೀರಿ. ಕೊನಿಗೆ ತನುವಿರೋ ಕಡೇಲಿ ಉಳ್ಕಂಡು ಅಲ್ಲೇ ಮನೆಮಠ ಮಾಡ್ಕಂಡು ಊರ್ಜಿತ ಆಗೂರಂತೆ. ಸೂರ್ಯ ಮುಳುಗೋ ಹೊತ್ತಿಗೆ ನಾನಿಲ್ಲಿ ನಿಂತ್ಕಂದು ಶಂಖ ಊದ್ತೀನಿ, ಜಾಗಟೆ ಬಡಿತೀನಿ. ನೀವು ಆ ಸದ್ದ ಕೇಳೋವತ್ತಿಗೆ ಇಂಥಿಂಥ ಬೆಟ್ಟ ಹತ್ತಿ ನಿಲ್ಲಬೇಕು ಅಂತ ದಿಕ್ಕು, ನೆಲೆ, ಅಲ್ಲಿಯ ಜನಮನದ ವಿಚಾರವ ತನ್ನು ಕಳ್ಳುಬಳ್ಳಿಗೆ ತಿಳಸಿಕೊಟ್ಟುದ್ದೇ ಅವರಿಗೆ ನೀವಿನ್ನ ಹೊರಡಿ, ಈಪಟು ಅಂದ.

ಜನ ಬಂದು ನನ್ನ ಪೂಜದಂಗೆಯ ನಿಮ್ಮನ್ನು ಪೂಜಲಿ ಅಂದುಬುಟ್ಟು ಎಲ್ರಕ್ಕು ಹಿರಿಯಣ್ಣ ಆದೋನು ತಮ್ಮದಿರನೂ ತೆಂಗೇನೂ ಹರಸಿ ಕಣ್ಣೀರ ಕಚ್ಕಂದು ಕಳ್ಸಕೊಟ್ಟ.

ಉಳಿದ ಐದಾಳುವೆ ಐದೂ ದಿಕ್ಕಿಗೆ ಹೊಂಟ್ರು. ಒಬ್ರು ಮೇಲುಕೋಟೆ ದಿಕ್ಕ ಹಿಡದು ಆ ಬೆಟ್ಟ ಹತ್ತಿದ್ರು. ಇನ್ನೇನು ತುಟ್ಟ ತುದಿಗೆ ಒಂದು ಮೈಲಿ ಇತ್ತು. ಸುಸ್ತಾಗಿತ್ತಲ್ಲ! ಯಾರೋ ಅಕ್ಕ ತಂಗೀರ ಕೊಳವ ತೋರದ್ರು. ಮೈ ತೊಳಕಳನ ಅಂತ ಅಲ್ಲಿಗೆ ಹೋದ್ರು ಚೆಲುವಪ್ಪ. ಅಲ್ಲಿ ‘ಆ ಕೊಳ ಬೇಡಿ ಸ್ವಾಮಿ, ಈ ಕೊಳಕ್ಕೆ ಬನ್ನಿ’ ಅಂದು ಪಕ್ಕದ ಕೊಳಕ್ಕೆ ಅಲ್ಲಿದ್ದವರು ಕರದ್ರು. ಅಕ್ಕಪಕ್ಕದಲ್ಲೇ ಅಕ್ಕತೆಂಗೀರ ಕೊಳವೆರಡು ಇದ್ವು. ಯಾಕೆ? ಅಂದ ಚೆಲುವಪ್ಪ.

ಇವಳು ಇದಳಲ್ಲ ತೆಂಗೆ, ಬಂದು ಕೇಳ್ದೋರಿಗೆ ದವಸವ ಸೇರಲ್ಲಿ ಅಳಕೊಟ್ಟು. ಉಳದ ದವಸ ಮುಗ್ಗೋಗಿದ್ದೇಯ ಈ ಕೊಳದ ನೀರು ಪಾಚಿಗಟ್ಟಿತು. ಅದನ್ನ ಇವತ್ತೂ ಯಾರೂ ಉಪಯೋಗುಸ್ದೆ ಹೋದ್ರು. ಪಕ್ಕದಲ್ಲಿರೊ ಅಕ್ಕ ಬಂದು ಬಂದೋರಿಗೆಲ್ಲವ ತನ್ನಲ್ಲಿರದನ್ನೆಲ್ಲ ಬಳ್ಳದಲ್ಲಿ ಅಳಕೊಟ್ಲು. ಮೊರ ಕುಕ್ಕೆಲಿ ತುಂಬಕೊಟ್ಲು. ಅದಕ್ಕೆ ಅಕ್ಕನ ಕೊಳ ತಿಳಿಯಾದ ಹಾಲುಕೊಳ ಆತು.

ಈ ಮಾತ ಕೇಳಿದ ಚೆಲುವಪ್ಪ ಇದ್ದೋನು ಹಾಲುಕೊಳಕ್ಕೆ ಇಳದು ತಿಳಿನೀರಲ್ಲಿ ಮೈ ತೊಳಕಂಡು ಹೋಗಿ ಊರೊಳಗೆ ಹಾಡು ಹಸೆ ಹೇಳ್ತಿದ್ರಲ್ಲ... ಅದ ಕೇಳ್ತ ಅರಳಿಕಟ್ಟೆಲಿ ಕುಂತಕಂದ. ಹಂಗೆ ನಿದ್ದೆ ಹೋಬುಟ್ಟ. ಸಂದೆ ಆಗೋತು. ಅಣ್ಣ ತಿಮ್ಮಪ್ಪನ ಶಂಖ ಊದೇಬುಡತು. ಇವನು ಮ್ಯಾಲೆ ಹತ್ತದ ಬುಟ್ಟು ಅಲ್ಲೇ ಒಡಮೂಡದೋನು ಊರೊಳಗೆ ನೆಲೆಯಾಗೋದ. ಅವನು ಸ್ನಾನ ಮಾಡಿದ ಅಕ್ಕನ ಕೊಳದ ನೀರಲ್ಲೇ ಇವತ್ತಿಗೂವೆ ‘ಚೆಲುವರಾಯಸ್ವಾಮಿ’ಗೆ ಮೈ ತೊಳಿಯದು.

ಅಷ್ಟು ದೂರದಿಂದ ಬಂದೋನಿಗವನಿಗೆ ಇನ್ನೇನು ಒಂದು ಮೈಲಿ ದೂರದಲ್ಲಿದ್ದ ಬೆಟ್ಟದ ತುದಿ ಹತ್ತಕ್ಕೆ ಆಗ್ನಿಲ್ಲ. ನೋಡಿ! ಜನ ಇಲ್ಲೇ ದೇವಸ್ಥಾನವ ಕಟ್ಟಂಡ್ರು.

ಹಂಗೆ ಶಕುನಿರಂಗ ನಡುಕಲೋನು ಮೂರನೆ ಮಗ ಸಖರಾಯಪಟ್ನದವರಗೂ ನಡಕ ಬಂದ. ಬಂದು ನೋಡ್ತನೆ! ಸಮುದ್ರದಂಗೆ ನೀರು ಬೆಟ್ಟದ ತಪ್ಪಲಲ್ಲಿ ನಿಂತೀತೆ. ತಿರುತಿರುಗಿ ನೋಡ್ತನೆ. ಹಸುರು, ತ್ವಾಟ ತುಡಿಕೆ, ಆ ಕರೆ ಮಣ್ಣು, ಸುತ್ತಾಲೂ ಬೆಟ್ಟದ ಹಾಸು. ಅದರ ಹೆಸರು ‘ಅಯ್ಯನಕೆರೆ’. ಅಗಾಧವಾದ ನೀರ ಕಂಡು ಬೆರಗು ಬಿದ್ದೋದ. ಏಳು ಬೆಟ್ಟನೇ ಅಡಗೀತಲ್ಲ ಈ ಕೆರೆಲಿ! ಅಂತ ಮೂಗಿನ ಮೇಲೆ ಬೆರಳಿಟ್ಕಂಡ. ಅದ ಕಟ್ಟದೋನು ಸಖರಾಯ ಅನ್ನೋ ಪಾಳೆಗಾರ.

‘ಇಷ್ಟ್ರಮಟ್ಟಿಗೀತಲ್ಲ, ಈ ಕೆರೆ! ಅಬ್ಬಾಡೆ, ಕಟ್ಟಿದೋನ ಕಂಡು ಬರಣ ತಡಿ’ ಅಂತ ಅನ್ನುಸುಬುಡ್ತು. ಸಖರಾಯನ ಅರಮನಿಗೆ ಹ್ವಾದ. ಹ್ವಾದನೆ ಮಾತು ಮಾತ್ನಾಗೆ ಇಬ್ರಾಳ ನಡುವೆ, ಸ್ನೇಹ ಕುದ್ರಕಂಡು ಬೆಳದೋತು. ದೊರಿಗೆ ಶಕುನ ಹೇಳಕೆ ಕುಂತ. ಶಕುನ ಹೇಲೊ ವಿದ್ಯೆ ಇವ್ನಿಗೆ ಗೊತ್ತಿತ್ತಲ್ಲ! ಅಂಗಾಡಿ ಇಂಗಾಡಿ ರಾಜನ ಜೊತೆ ಬ್ಯಾಟೆಗೂ ಹೊರಟ. ಹೋದೋನು, ಅಲ್ಲಿಯ ಕಾಡು ಜಿಂಕೆ, ಕಡವೆ ಹೊಡದು, ತಿಂದು, ಅದರ ಕೊಂಬ ಪೋಣುಸಿ ಕಟ್ಕಂಡು ಬರದ್ರಲ್ಲಿ ತಿಮ್ಮಪ್ಪನ ಶಂಖದ ಸದ್ದು ಕೇಳಿ ಎಚ್ಚತ್ಕಂಡು ನೋಡತನೆ. ಇನ್ನೂ ಅವನು ಬೆಟ್ಟ ಏರೇ ಇಲ್ಲ. ಆ ಬೆಣ್ಣೆ ಒಟ್ಲು ಬೆಟ್ಟ ಅಲ್ಲೇ ನಿಂತಂಗೆ ನಿಂತೀತೆ.